ಅಸಲು ದಾವೆ ಸಂಃ 79/2016 ಡಿ.ಡಬ್ಲ್ಯೂಃ1

ದಿನಾಂಕಃ 11-02-2020

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು ವಾದಿ ಪರ ವಕೀಲರಿಂದಃ

ನಿಡಿ.02 ರಲ್ಲಿ ನನ್ನ ಆಧಾರ್ ಪತ್ರ ಆಗಲಿ ನನ್ನ ತಂದೆಯವರ ಆಧಾರ್ ಪತ್ರ ಆಗಲಿ ನಮೂದಿಸಿರುವುದಿಲ್ಲ ಎಂದರೆ ಸರಿ . ಶೃಂಗಾರ ಭಾಗ್ ಗ್ರಾಮದಲ್ಲಿ ನಾನು 1954 ರಿಂದ ವಾಸವಿರತ್ತೇನೆ. ನನ್ನ ತಂದೆಯವರು ಅಲ್ಲಿಯೇ ವಾಸವಿರುತ್ತಾರೆ. ಹನುಮನಹಳ್ಳಿ ಗ್ರಾಮ ಹೊನ್ನಾಳಿ ತಾಲ್ಲೂಕು ಎಂದರೆ ಸರಿ . ನನ್ನ ಮತ್ತು ನನ್ನ ತಂದೆಯ ಆಧಾರ್ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ವಾದಿ ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಯ ಮಾರುಕಟ್ಟೆ ಬೆಲೆಯನ್ನು ನಿಗದಿ ಮಾಡಿ ದಾವೆ ಹೂಡಿರುತ್ತಾರೆ ಎಂದರೆ ಸರಿ ಅಲ್ಲ . ದಾವಾ ಆಸ್ತಿ ಲೇ ಔಟ್ ಪ್ಲಾನ್ ಅಲ್ಲ ಎಂದರೆ ಸರಿ . ನಿಡಿ.03 ರಲ್ಲಿ ತತ್ಸಮ ಲೇ ಔಟ್ ಪ್ಲಾನ್ ಬೆಲೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ . ನಾನು ಸಲ್ಲಿಸಿರುವ ನಿಡಿ.03 ರಲ್ಲಿ ಅಡಿ ಅಥವಾ ಚದುರ ಮೀಟರ್ ಎಂದು ನಮೂದು ಇರುವುದಿಲ್ಲ ಎಂದರೆ ಸರಿ . ದಾವಾ ಆಸ್ತಿಯನ್ನು ಮಾರಾಟಕ್ಕೆ ಹಚ್ಚಿರುವುದಿಲ್ಲ ಎಂದರೆ ಸರಿ . ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ರತಿವಾದಿ 01 ರವರ ದಾವೆ ನಿರ್ವಹಿಸುವ ಜವಾಬ್ದಾರಿ ನನಗೆ ನೀಡಲಾಗಿರುತ್ತದೆ ಎಂದು ಬರೆದಿರುತ್ತದೆ ಅದನ್ನು ಹೊರತುಪಡಿಸಿ ಬೇರೆ ಏನೂ ಬರೆದಿರುವುದಿಲ್ಲ.

ಮರು ವಿಚಾರಣೆ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಚನ್ನಗಿರಿ.